Literacy for a Billion

Movie: Shabarimale Swamy Ayyappa
Year: 1990

Song: Ganapatiye Buddhidaatane
Lyricist:

ಗಣಪತಿಯೇ ಬುದ್ಧಿದಾತನೇ ಸಿದ್ಧಿನಾಥನೇ
ಸಲಹು ಗಣೇಶನೇ ವಿದ್ಯಾಧಿಪನೇ
ನೀ ನಮ್ಮ ಗೆಲುವಾಗಿ ಬಾ
ನೀ ನಮ್ಮ ಗೆಲುವಾಗಿ ಬಾ
ಗಜಮುಖನೇ ನೀ ನಮ್ಮ ಗೆಲುವಾಗಿ ಬಾ
ನೀ ನಮ್ಮ ಗೆಲುವಾಗಿ ಬಾ
ಗಜಮುಖನೇ ನೀ ನಮ್ಮ ಗೆಲುವಾಗಿ ಬಾ
ಗುರುಕುಲಕೆ ವರವಾಗಿ ಗುರಿ ತೋರೋ ಗುರುವಾಗಿ
ಪೊರೆ ನೀನು ಎಂದೆಂದೂ ಕರುಣಾಳು ಬಾ ಬಂಧು
ನೀ ನಮ್ಮ ಗೆಲುವಾಗಿ ಬಾ
ಗಜಮುಖನೇ ನೀ ನಮ್ಮ ಗೆಲುವಾಗಿ ಬಾ

ಬಾಳಲ್ಲಿ ಮುಂದಾಗಿ ಬಾ ನಮ್ಮ ಜೊತೆಯಾಗಿ
ಕ್ಷಣ ಕ್ಷಣವೂ ನಮಗಾಗಿ ನೆರವಾಗು ಬೆಳಕಾಗಿ
ಬಾಳಲ್ಲಿ ಮುಂದಾಗಿ ಬಾ ನಮ್ಮ ಜೊತೆಯಾಗಿ
ಕ್ಷಣ ಕ್ಷಣವೂ ನಮಗಾಗಿ ನೆರವಾಗು ಬೆಳಕಾಗಿ
ದಯೆ ಇರಲಿ ನಮ್ಮಲ್ಲಿ ಗತಿ ನೀನೇ ಹಾದಿಯಲಿ
ನೀ ನಮ್ಮ ಗೆಲುವಾಗಿ ಬಾ
ಗಜಮುಖನೇ ನೀ ನಮ್ಮ ಗೆಲುವಾಗಿ ಬಾ

ನಿಧಿಯಾಗಿ ವಿಧಿಯಾಗಿ ಸುಧೆ ತುಂಬು ಒಲವಾಗಿ
ಹಿರಿಯಾದ ಸಿರಿ ನೀನು ಈ ಬಾಳ ಸವಿ ಜೇನು
ನಿಧಿಯಾಗಿ ವಿಧಿಯಾಗಿ ಸುಧೆ ತುಂಬು ಒಲವಾಗಿ
ಹಿರಿಯಾದ ಸಿರಿ ನೀನು ಈ ಬಾಳ ಸವಿ ಜೇನು
ದಯೆ ಇರಲಿ ನಮ್ಮಲ್ಲಿ ಗತಿ ನೀನೇ ಹಾದಿಯಲಿ
ನೀ ನಮ್ಮ ಗೆಲುವಾಗಿ ಬಾ
ಗಜಮುಖನೇ ನೀ ನಮ್ಮ ಗೆಲುವಾಗಿ ಬಾ
ಗುರುಕುಲಕೆ ವರವಾಗಿ ಗುರಿ ತೋರೋ ಗುರುವಾಗಿ
ನೀ ನಮ್ಮ ಗೆಲುವಾಗಿ ಬಾ
ನೀ ನಮ್ಮ ಗೆಲುವಾಗಿ ಬಾ
ನೀ ನಮ್ಮ ಗೆಲುವಾಗಿ ಬಾ
ನೀ ನಮ್ಮ ಗೆಲುವಾಗಿ ಬಾ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*